ನಿ-330
ಕ್ರ-80 - ಕಂ....

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ರವರು ನಿಯಮ 330 ರಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ.

**ಸೂಚನೆ:** ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಿವಿಧ ಬಡಾವಣೆಗಳಲ್ಲಿ ನಿರ್ಮಿಸಿರುವ ನಿವೇಶನಗಳನ್ನು ಕಾನೂನಿನ ಪ್ರಕಾರ ಆನ್ ಲೈನ್ ಮುಖಾಂತರ ಹರಾಜು ಪ್ರಕ್ರಿಯೆ ನಡೆಸದೆ ಅಕ್ರಮವಾಗಿ ಮ್ಯಾನುಯಲ್ ಹರಾಜು ಮೂಲಕ ಕಡಿಮೆ ಬೆಲೆಗೆ ನಿವೇಶನಗಳನ್ನು ಹರಾಜು ಮಾಡಿದ್ದರಿಂದ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಆರ್ಥಿಕ ನಷ್ಟವುಂಟು ಮಾಡಿರುವುದರಿಂದ ಸದರಿ ಹರಾಜಿನಲ್ಲಿ ವಿಲೇವಾರಿ ಮಾಡಿದ ನಿವೇಶನಗಳನ್ನು ರದ್ದುಪಡಿಸಿ ಸಂಬಂಧಿಸಿದವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮಕೈಗೊಳ್ಳುವ ಕುರಿತು ನಿಯಮ 330 ರಡಿಯಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:** ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಾಡಲಾದ ಬಹಿರಂಗ ಹರಾಜಿನಲ್ಲಿ ಒಳಗೊಂಡ ವಿವಿಧ ಯೋಜನೆಯಲ್ಲಿನ ಒಟ್ಟು 111 ನಿವೇಶನಗಳು ಈ ಮೊದಲು ವಿವಿಧ ದಿನಾಂಕಗಳಂದು ಮಾಡಲಾದ ಇ-ಹರಾಜಿನಲ್ಲಿ ನಮೂದಾಗಿ ತ್ರಿಕೋನಾಕಾರದ್ದಾಗಿದ್ದು, ಕೆಲವು ನಿವೇಶನ ಉದ್ದಳತೆಯಲ್ಲಿ ವ್ಯತ್ಯಾಸ ಇರುತ್ತದೆ. ಕೆಲವು ನಿವೇಶನಗಳು ವಾಸ್ತು ಪ್ರಕಾರ ಸರಿ ಇರುವುದಿಲ್ಲವೆಂದು ಸದರಿ ನಿವೇಶನಗಳಿಗೆ ಬ್ಡೇಡಿಕೆ ಬಾರದೇ ಹಾಗೇ ಉಳಿದ ನಿವೇಶನಗಳಾಗಿರುತ್ತವೆ. ಇಂತಹ ನಿವೇಶನಗಳನ್ನು ಹರಾಜು ಮಾಡುವ ಕುರಿತು ಸರ್ಕಾರದ ಪತ್ರ ಸಂಖ್ಯೆ: ನಅಇ 52 ಬೆಮಪ್ರಾ 2020 (ಇ-ಕಡತ) ದಿನಾಂಕ:24.08.2020 ನೇದ್ದರಡಿ "Finance Department concurs to the proposed subject to the condition that manual auction will be done only after no response is received during e-auction and the process of manual auction should be conducted in a transparent way and should be video graphed" ತಿಳಿಸಲಾಗಿರುತ್ತದೆ.

ದಿನಾಂಕ:25.10.2021 ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ: 57 ರಲ್ಲಿ ಪ್ರಾಧಿಕಾರದ ವಿವಿಧ ಯೋಜನೆಯಲಿನ ಬಿಡಿ ಹಾಗೂ ಮೂಲೆ ನಿವೇಶನಗಳನ್ನು ಈ ಹಿಂದೆ ವಿವಿಧ ದಿನಾಂಕಗಳಂದು ಇ-ಹರಾಜು ಮೂಲಕ ಅರ್ಜಿಗಳನ್ನು ಆಹ್ವಾನಿಸಿದಾಗ ಕೆಲವು ನಿವೇಶನಗಳು ತ್ರಿಕೋನಾಕಾರದ್ದಾಗಿದ್ದು, ಕೆಲವು ನಿವೇಶನದ ಉದ್ದಳತೆಯಲ್ಲಿ ವ್ಯತ್ಯಾಸ ಇರುತ್ತದೆ. ಕೆಲವು ನಿವೇಶನಗಳು ವಾಸ್ತು ಪ್ರಕಾರ ಸರಿ ಇರುವುದಿಲ್ಲವೆಂದು ನಿವೇಶನಗಳಿಗೆ ಬೇಡಿಕೆ ಬಂದಿರುವುದಿಲ್ಲ. ಅಂತಹ ನಿವೇಶನಗಳ ಪಟ್ಟಿಯನ್ನು ಲಗತ್ತಿಟ್ಟು ಸಭೆಗೆ ಆಯುಕ್ತರು ವಿವರಿಸಿದರು. ಸದರಿ ವಿಷಯದ ಕುರಿತು ಕೂಲಂಕಷವಾಗಿ ಸಭೆಯ ಎಲ್ಲ ಸದಸ್ಯರು ಚರ್ಚಿಸಿದರು ಹಾಗೂ ಪಟ್ಟಿಯಲ್ಲಿ ಇರುವ ನಿವೇಶನಗಳು ತ್ರಿಕೋನಾಕಾರದ್ದಾಗಿದ್ದು, ಕೆಲವು ನಿವೇಶನದ ಉದ್ದಳತೆಯಲ್ಲಿ ವ್ಯತ್ಯಾಸ ಇರುತ್ತದೆ. ಕೆಲವು ನಿವೇಶನಗಳು ವಾಸ್ತು ಪ್ರಕಾರ ಸರಿ ಇರುವುದಿಲ್ಲವೆಂದು ಗಮನಿಸಿದರು. ನಂತರ ಸದರಿ ನಿವೇಶನಗಳನ್ನು ಬಹಿರಂಗ ಹರಾಜು ಮಾಡುವಾಗ

ಸರ್ಕಾರವು ನಿಗದಿಪಡಿಸಿದ ಮಾರುಕಟ್ಟೆ ಬೆಲೆಯನ್ನು ನಿವೇಶನದ ಮೂಲ ಬೆಲೆಗೆ ನಿಗದಿಪಡಿಸುವುದು ಮತ್ತು ಹರಾಜಿನಲ್ಲಿ ಪ್ರಸ್ತಾಪಿಸುವ ದರವನ್ನು ನಿಗದಿಪಡಿಸಿದ ಕನಿಷ್ಟ ಪ್ರತಿ ಚದರ ಅಡಿಗೆ ರೂ.50/- ದರದ ಮೇಲೆ ಪ್ರತಿ ಚದರ ಅಡಿ ಹೆಚ್ಚಿಸಿ ಕೋರಲಾಗುವಂತೆ ನಿಗದಿಪಡಿಸುವುದು ಹಾಗೂ ಇನ್ನು ಮುಂದೆ ಕರೆಯುವ ಇ-ಹರಾಜಿನ ಕೊನೆಯ ದಿನ ಮುಕ್ತಾಯವಾದ ನಂತರ ಮರುದಿನವೇ ಬಹಿರಂಗ ಹರಾಜನ್ನು ಕರೆಯುವುದರಿಂದ ಸಾರ್ವಜನಿಕರಿಗೆ ಇ-ಹರಾಜಿನಲ್ಲಿ ನಿವೇಶನ ಸಿಗದವರಿಗೆ ಬಹಿರಂಗ ಹರಾಜಿನಲ್ಲಿ ನಿವೇಶನಗಳನ್ನು ಪಡೆಯುವ ಅವಕಾಶ ಪಡೆಯಲು ಎರಡೆರಡು ಅವಕಾಶವನ್ನು ನೀಡಿದಂತಾಗುತ್ತದೆ. ಆದ್ದರಿಂದ ಸರ್ಕಾರದ ಪತ್ರ ದಿನಾಂಕ:24.08.2020 ರಲ್ಲಿ ನೀಡಿದ ನಿರ್ದೇಶನದ ಪ್ರಕಾರ ಪ್ರಾಧಿಕಾರದ ವಿವಿಧ ಯೋಜನೆಯಲ್ಲಿನ ನಿವೇಶನಗಳನ್ನು ಬಹಿರಂಗ ಹರಾಜನ್ನು ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಯೋಜನೆ ಸಂಖ್ಯೆ: 35+43+43ಎ ರಾಮತೀರ್ಥ ನಗರ, ಯೋಜನೆ ಸಂಖ್ಯೆ:56 ಶ್ರೀ ಹೆಚ್.ಡಿ. ಕುಮಾರಸ್ವಾಮಿ ಬಡಾವಣೆ, ಯೋಜನೆ ಸಂಖ್ಯೆ:-6, 2 ನೇ ಹಂತ ರಾಣಿ ಚೆನ್ನಮ್ಮ ನಗರ ಮತ್ತು ಯೋಜನೆ ಸಂಖ್ಯೆ:51 ಲಕ್ಷ್ಮೀ ಟೇಕಡಿಯಲ್ಲಿ ಇ-ಹರಾಜನ್ನು ಕರೆಯಲಾಗಿದ್ದು, ಇ-ಹರಾಜಿನ ಕೊನೆಯ ದಿನಾಂಕ:17.03.2022 ರಂದು ನಿಗದಿಪಡಿಸಲಾಗಿತ್ತು. ನಂತರ ದಿನಾಂಕ:25.10.2022 ರ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ: 57 ರ ಪ್ರಕಾರ ಪ್ರಾಧಿಕಾರದ ವಿವಿಧ ಯೋಜನೆಯಲ್ಲಿನ ಬೇಡಿಕೆ ಬಾರದೇ ಇರುವ ನಿವೇಶನಗಳನ್ನು ದಿನಾಂಕ:18.03.2022 ರಂದು ಬಹಿರಂಗ ಹರಾಜು ಮಾಡಲಾಗಿರುತ್ತದೆ. ಈ ಕುರಿತು ಪ್ರಾಧಿಕಾರದ ವಿವಿಧ ಯೋಜನೆಗಳಲ್ಲಿ ಖಾಲಿ ಇರುವ ಮೂಲೆ ಮತ್ತು ಬಿಡಿ ನಿವೇಶನಗಳನ್ನು ಇ ಮತ್ತು ಎಮ್ ಹರಾಜುಗಳ ಮೂಲಕ ದಿನಾಂಕ:05.03.2022 ರಂದು ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಪ್ರಕಟಣೆಯು ದಿನಾಂಕ:09.03.2022 ರಂದು ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ಹಾಗೂ The New Indian Express ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತವೆ ಮತ್ತು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಕಛೇರಿಯ ನೋಟಿಸ್ ಬೋರ್ಡಿಗೆ ಹಾಗೂ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕ ತಿಳುವಳಿಕೆಗಾಗಿ ಪ್ರಕಟಣೆಯನ್ನು ಇರಿಸಲಾಗಿರುತ್ತದೆ.

ಅದರಂತೆ, ಪ್ರಾಧಿಕಾರದ ವಿವಿಧ ಯೋಜನೆಯಲ್ಲಿ ಒಟ್ಟು 111 ನಿವೇಶನಗಳಿಗೆ ಬಹಿರಂಗ ಹರಾಜನ್ನು ಕರೆಯಲಾಗಿರುತ್ತದೆ. ಅದರಲ್ಲಿ 91 ನಿವೇಶನಗಳನ್ನು ಹರಾಜು ಮಾಡಲಾಗಿ ಇನ್ನುಳಿದ 19 ನಿವೇಶನಳಿಗೆ ಬೇಡಿಕೆ ಬಂದಿರುವುದಿಲ್ಲ ಮತ್ತು 01 ನಿವೇಶನಕ್ಕೆ 72 ಗಂಟೆ ಒಳಗಡೆ ಶೇ. 25 ರಷ್ಟು ಹಣವನ್ನು ಭರಣಾ ಮಾಡದೇ ಇರುವುದರಿಂದ ನಿವೇಶನಕ್ಕೆ ಭರಣಾ ಮಾಡಿದ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಹಾಗೂ ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮಗಳು 1991 ರ ನಿಯಮ 6(3)(ಬಿ) ನೇದ್ದರ ಪ್ರಕಾರ

ಮುಂಗಡ ಹಣವನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಿವೇಶನಗಳನ್ನು ರದ್ದುಪಡಿಸಿ ಆದೇಶಿಸಲಾಗಿರುತ್ತದೆ.

ಸದರಿ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಸರ್ಕಾರದ ಪತ್ರದಲ್ಲಿ ತಿಳಿಸಿದ ಪ್ರಕಾರವೇ ಕ್ರಮ ಕೈಗೊಂಡು, ಬಡಾವಣೆಗಳಲ್ಲಿನ ನಿವೇಶನಗಳ ಹರಾಜು ಕುರಿತು ಬಹಿರಂಗ ಹರಾಜು ಪ್ರಕ್ರಿಯೆಯನ್ನು ಸಾರ್ವಜನಿಕರ ಸಮ್ಮುಖದಲ್ಲಿ ಕೈಗೊಂಡು ಸದರಿ ಹರಾಜಿನ ಎಲ್ಲ ಪ್ರಕ್ರಿಯೆಗಳನ್ನು ವಿಡಿಯೋಗ್ರಾಫಿ ಮೂಲಕ ನಿಯಮಾನುಸಾರ ಕ್ರಮಕೈಗೊಳ್ಳಲಾಗಿರುತ್ತದೆ. ನಂತರ ಸದರಿ ಹರಾಜಿನ ಕುರಿತು ದಿನಾಂಕ:31.03.2022 ರಂದು ಜರುಗಿದ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಲಾಗಿ, ಪ್ರಾಧಿಕಾರದ ಸಭೆಯ ಸದಸ್ಯರೆಲ್ಲರೂ ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ದೃಢೀಕರಿಸಿರುವುದಾಗಿ ಪ್ರಾಧಿಕಾರವು ಅಭಿಪ್ರಾಯಿಸಿರುತ್ತದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸ್ವೀಕೃತವಾಗಿರುವ ದೂರಿನ ಕುರಿತಂತೆ, ಪರಿಶೀಲಿಸಿ ಸ್ಪಷ್ಟ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಬೆಳಗಾವಿ ರವರಿಗೆ ದಿನಾಂಕ:22.12.2022 ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ. ಜಿಲ್ಲಾಧಿಕಾರಿ ರವರಿಂದ ವರದಿಯು ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಕಡತ ಸಂಖ್ಯೆ: ನಅಇ 70 ಎಲ್‌ಸಿಕ್ಯೂ 2022 (ಇ)

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು